ಕರ್ನಾಟಕ ಸರ್ಕಾರ
ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ, ದೇವದುರ್ಗ
ಕ್ರಿಮಿನಲ್ ಮಿಸ್ ನಂ. **383/2025**

| | | |
|---|---|---|
| ಸಾಕ್ಷಿದಾರರ ಹೆಸರು | ಮಾರ್ತಂಡಪ್ಪ | ಪಿ. ಡಬ್ಲ್ಯೂ – ೧ |
| ತಂದೆಯ ಹೆಸರು | ದಿವಂಗತ ಬಸಪ್ಪ ಉರ್ಫ್ ಬಸಣ್ಣ | |
| ವಯಸ್ಸು | 65 ವರ್ಷ | ಪ್ರಮಾಣ ವಚನ ಸ್ವೀಕರಿಸಿದ ದಿನಾಂಕ |
| ಉದ್ಯೋಗ | ಒಕ್ಕಲುತನ | **17-06-2025** |
| ವಾಸಸ್ಥಳ | ಹೇಮನೂರು ತಾ ದೇವದುರ್ಗ | |

ಮುಖ್ಯ ವಿಚಾರಣೆಃಃ– ಶ್ರೀ ಬಿ.ಹೆಚ್. ವಕೀಲರಿಂದಃಃ–

ನಾನು ಈ ಕೇಸಿನ 1ನೇ ಅರ್ಜಿದಾರನಾಗಿರುತ್ತೇನೆ. ನನ್ನ ತಂದೆಯವರಾದ ದಿವಂಗತ ಬಸಪ್ಪ ಉರ್ಫ್ ಬಸಣ್ಣ ತಂದೆ ರಂಗಪ್ಪ ಇವರು ದೇವದುರ್ಗ ತಾಲೂಕಿನ ಹೇಮನೂರು ಗ್ರಾಮದ ನಮ್ಮ ಮನೆಯಲ್ಲಿ ದಿಃ 18-08-2006 ರಲ್ಲಿ ಮರಣ ಹೊಂದಿರುತ್ತಾರೆ. ಅವರ ಮರಣದ ಬಗ್ಗೆ ನಾನು ಸಂಬಂಧಪಟ್ಟ ಕಚೇರಿಗೆ ತಿಳಿಸಿರುವುದಿಲ್ಲ. ಸದರಿಯವರ ಮರಣ ಪ್ರಮಾಣ ಪತ್ರವು ಜಮೀನುಗಳ ಖಾತೆ ಮಾಡಿಸುವ ಉದ್ದೇಶಕ್ಕಾಗಿ ಅವಶ್ಯಕತೆ ಇರುತ್ತದೆ. ಎದುರುದಾರರು ಕಚೇರಿಯವರಿಗೆ ನೀಡಿದ ಅಲಭ್ಯ ಪ್ರಮಾಣ ಪತ್ರವನ್ನು ನಿಪಿ–1, ಪತ್ರಿಕ ಪ್ರಕಟಣೆಯ ಮೂಲ ಪ್ರತಿಯನ್ನು ನಿಪಿ 2 ಮತ್ತು 3 ಎಂದು, 02 ಆಧಾರ್ ಕಾರ್ಡ್ ನ ನೋಟರಿ ದೃಢೀಕೃತ ಪ್ರತಿಯನ್ನು ನಿಪಿ–4 ಮತ್ತು 5 ಎಂದು, ಅಂಗನವಾಡಿ ಕೇಂದ್ರ ದವರು ನೀಡಿರುವ ಮರಣ ವರದಿಯನ್ನು ನಿ ಪಿ 6 ಎಂದು, ನೋಟರಿ ದೃಢೀಕೃತ ವಂಶವೃಕ್ಷವನ್ನು ನಿ ಪಿ 7 ಎಂದು ಗುರುತಿಸಲಾಯಿತು. ಆದ್ದರಿಂದ ಅರ್ಜಿಯಲ್ಲಿ ಕೋರಿದಂತೆ ಆದೇಶವಾಗಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಪಾಟೀ ಸವಾಲು: ಏಕಪಕ್ಷೀಯವಾಗಿರುವುದರಿಂದ ಪಾಟೀ ಸವಾಲು ಇರುವುದಿಲ್ಲ.

ಮರು ವಿಚಾರಣೆ; ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಒ
ಸಹಿ/–

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ
ದೇವದುರ್ಗ